# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103☏:0816-2255650, 2273511,ಫ್ಯಾಕ್ಸ್ :0816-2270719

ಸಂಖ್ಯೆ : ತು.ವಿ.: ಪ.ವಿ.:ವಿ.ನಿ.-09:2022-23:163 ದಿನಾಂಕ:16.06.2022

## ಅಧಿಸೂಚನೆ

ವಿಷಯ : 2021-22 ನೇ ಸಾಲಿನ 2022 ರ ಜೂನ್/ಜುಲೈ ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಎಂ.ಬಿ.ಎ ಪದವಿಯ ಪ್ರಥಮ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಸಂಬಂಧಿಸಿದಂತೆ 2021-22 ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 16.06.2022

* * * * *

2021-22 ನೇ ಶೈಕ್ಷಣಿಕ ಸಾಲಿನ 2022 ರ ಜೂನ್/ಜುಲೈ ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಗಳ ಪ್ರಥಮ ಸೆಮಿಸ್ಟರ್‌ನ ಎಂ.ಬಿ.ಎ ಪದವಿಗೆ UUCMS ತಂತ್ರಾಂಶದ ಮೂಲಕ (ಶೈಕಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವಂತಹ) ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

ಪ್ರಸಕ್ತ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಪೂರ್ಣ ದತ್ತಾಂಶವನ್ನು ಸಮಗ್ರ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (UUCMS) ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದ್ದು, ಸದರಿ ತಂತ್ರಾಂಶದಲ್ಲಿ ವಿಶ್ವವಿದ್ಯಾನಿಲಯದಿಂದ ಕಾಲೇಜು ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರು/ ಅಧ್ಯಕ್ಷರು/ಸಂಯೋಜಕರು, ಅಧ್ಯಾಪಕರು, ವಿದ್ಯಾರ್ಥಿಗಳು ಇತ್ಯಾದಿ ಹಂತಗಳವರೆಗೆ ಸೂಕ್ತ ಜವಾಬ್ದಾರಿಗಳನ್ನು ಹಂಚಿಕೆ ಮಾಡಿ ಪ್ರತ್ಯೇಕ ಲಾಗಿನ್ ವಿವರಗಳನ್ನು ಒದಗಿಸಲಾಗಿರುತ್ತದೆ. ಇದೊಂದು ಹೊಸ ವ್ಯವಸ್ಥೆಯಾಗಿರುವುದರಿಂದ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಸಹಾಯ ಒದಗಿಸಲು ತಿಳಿಸಲಾಗಿದೆ.

ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಸಂಯೋಜಕರು ಮತ್ತು ಕಾಲೇಜು ಪ್ರಾಂಶುಪಾಲರು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಪಾವತಿಸುವುದು. ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಪರಿಶೀಲಿಸಿ UUCMS ತಂತ್ರಾಂಶದ ಮೂಲಕ ಅನುಮೋದಿಸುವುದು ಹಾಗೂ ವಿದ್ಯಾರ್ಥಿಗಳ ಪ್ರವೇಶಾನುಮೋದನೆ, ಪರೀಕ್ಷೆ ತೆಗೆದುಕೊಳ್ಳುವವರ ಅಂಕಿ-ಅಂಶಗಳನ್ನು ಬಾಹ್ಯವಾಗಿಯೂ ಕ್ರೋಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ 24.06.2022 ದಿನಾಂಕದೊಳಗೆ ಈ ಕೆಳಕಂಡ ನಮೂನೆಯಂತೆ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

**ನಮೂನೆ**

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ತೆಗೆದುಕೊಂಡಿರುವ ವಿಷಯ | ಶುಲ್ಕ ಪಾವತಿಸಿದ ವಿವರ & ದಿನಾಂಕ |
|---|---|---|---|---|
| 1. | | | | |
| 2. | | | | |

**ಗಮನಿಸಬೇಕಾದ ದಿನಾಂಕಗಳು**

| | | |
|---|---|---|
| 1. | ಪರೀಕ್ಷಾ ಶುಲ್ಕ ಪಾವತಿಸಲು ಪ್ರಾರಂಭ ದಿನಾಂಕ | 18.06.2022 |
| 2. | ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 22.06.2022 |
| 3. | ವಿದ್ಯಾರ್ಥಿಗಳಿಗೆ ರೂ 100/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 23.06.2022 |
| 4. | ಕಾಲೇಜಿನವರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ವಿವರಗಳನ್ನು UUCMS ಮೂಲಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 24.06.2022 |

ಪು.ತಿ.ನೋ.

## ಪ್ರಥಮ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕದ ವಿವರಗಳು

| ಪರೀಕ್ಷಾ ಶುಲ್ಕಗಳ ವಿವರ - (Freshers-UUCMS) | | |
|---|---|---|
| ಕ್ರ. ಸಂ. | ಪದವಿಗಳ ವಿವರ | ಪರೀಕ್ಷಾ ಶುಲ್ಕ |
| 1 | ಎಂ.ಬಿ.ಎ | 2000.00 |
| ಇತರೆ ಶುಲ್ಕಗಳು (ಪರೀಕ್ಷಾ ಶುಲ್ಕದಲ್ಲಿ ರಿಯಾಯಿತಿ ಪಡೆದಿರುವ ಹಾಗೂ ಪಡೆಯದಿರುವ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ)): | | |
| 1 | ಅಂಕಪಟ್ಟಿ ಶುಲ್ಕ | 156.00 |
| 2 | ಆನ್‌ಲೈನ್ ಅರ್ಜಿ ಶುಲ್ಕ | 30.00 |
| 3 | ಅರ್ಜಿ ಪರಿಶೀಲನಾ ಶುಲ್ಕ | 10.00 |
| 4 | ಪರೀಕ್ಷಾ ಸಿದ್ಧತಾ ಶುಲ್ಕ (Process fee) | 40.00 |

**ಸೂಚನೆ:** ಈ ಮೇಲ್ಕಂಡ ಕೋಷ್ಟಕದಲ್ಲಿರುವ ಪರೀಕ್ಷಾ ಶುಲ್ಕವು (2021-22ನೇ ಸಾಲಿನ) ನವೀನ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಸದರಿ ವಿದ್ಯಾರ್ಥಿಗಳು UUCMS ಮುಖಾಂತರ ಶುಲ್ಕವನ್ನು ಪಾವತಿಸಿ ಶುಲ್ಕದ ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸುವುದು.

| ಕ್ರ.ಸಂ. | ಪದವಿಗಳ ವಿವರ | ಪರೀಕ್ಷಾ ಶುಲ್ಕ | ಪೂರಕ (ಒಂದು ವಿಷಯಕ್ಕೆ) |
|---|---|---|---|
| 1 | ಎಂ.ಬಿ.ಎ | 2000 | 485-00 |
| ಇತರೆ ಶುಲ್ಕಗಳು (ಪರೀಕ್ಷಾ ಶುಲ್ಕದಲ್ಲಿ ರಿಯಾಯಿತಿ ಪಡೆದಿರುವ ಹಾಗೂ ಪಡೆಯದಿರುವ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ)): | | | |
| 1 | ಅಂಕಪಟ್ಟಿ ಶುಲ್ಕ | | 156.00 |
| 2 | ಆನ್‌ಲೈನ್ ಅರ್ಜಿ ಶುಲ್ಕ | | 30.00 |
| 3 | ಅರ್ಜಿ ಪರಿಶೀಲನಾ ಶುಲ್ಕ | | 10.00 |
| 4 | ಪರೀಕ್ಷಾ ಸಿದ್ಧತಾ ಶುಲ್ಕ (Process fee) | | 40.00 |
| 5 | ಪ್ರಾಯೋಗಿಕ ಶುಲ್ಕ (per practical) | | 150.00 |
| 6 | ಪ್ರಾಜೆಕ್ಟ್ ಶುಲ್ಕ (per project) | | 200.00 |
| 7 | ಕಿರು ಪ್ರಬಂಧ ಶುಲ್ಕ (per Dissertation) | | 200.00 |
| 8 | ಮೌಖಿಕ ಸಂದರ್ಶನ (per viva-voce) | | 150.00 |

**ಸೂಚನೆ:** ಈ ಮೇಲ್ಕಂಡ ಕೋಷ್ಟಕದಲ್ಲಿರುವ ಪರೀಕ್ಷಾ ಶುಲ್ಕವು ಪೂರಕ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಸದರಿ ವಿದ್ಯಾರ್ಥಿಗಳು SB Collect ಮುಖಾಂತರ ಶುಲ್ಕವನ್ನು ಪಾವತಿಸಿ EMS ನಲ್ಲಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವುದು.

2021-22 ನೇ ಸಾಲಿಗೆ UUCMS ತಂತ್ರಾಂಶದ ಮೂಲಕ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕ ಹಾಗೂ ಪತ್ರಿಕೆ/ವಿಷಯಗಳ ವಿವರಗಳನ್ನು ಸರಿಯಾಗಿ ನಮೂದಿಸುವಂತೆ ತಿಳಿಸಿ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

**ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯವು ವಿಭಾಗವಾರು ನಿಗದಿಪಡಿಸಿರುವ ದರಗಳಂತೆ ಪ್ರತ್ಯೇಕ ಹುಂಡಿಗಳನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

**ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ:**

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ. 2.50 ಲಕ್ಷದೊಳಗಿದ್ದು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದರೆ ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ.

ಆದರೆ, ಸದರಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ವಿನಾಯಿತಿಗೆ ಸಂಬಂಧಿಸಿದಂತೆ ಎಸ್.ಎಸ್.ಪಿ. ಅಡಿಯಲ್ಲಿ ವಿದ್ಯಾರ್ಥಿ ವೇತನವು ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಸಂದಾಯವಾಗುವುದರಿಂದ ವಿದ್ಯಾರ್ಥಿವೇತನ ಪಡೆದ ಒಂದು ವಾರದೊಳಗಾಗಿ ಶುಲ್ಕವನ್ನು ಪಾವತಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು. (ಅನುಬಂಧ-01 ರಲ್ಲಿ ಲಗತ್ತಿಸಲಾಗಿದೆ.)

ಪು.ತಿ.ನೋ.

ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.

ವಿಶ್ವವಿದ್ಯಾನಿಲಯದಿಂದ ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರವೇಶಾನುಮೋದನೆ ಪಡೆದ ಎಲ್ಲಾ ಅರ್ಹ ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾನಿಲಯದ ನಿಧಿಗೆ ನೇರವಾಗಿ UUCMS ತಂತ್ರಾಂಶದ ಮೂಲಕ ನಿಗದಿತ ದಿನಾಂಕದೊಳಗೆ ಪಾವತಿಸುವುದು.

***ವಿ.ಸೂ.: ಪರೀಕ್ಷಾ ಶುಲ್ಕ ಪಾವತಿಸಿರುವ ಪಟ್ಟಿಯನ್ನು ದ್ವಿ-ಪ್ರತಿಗಳಲ್ಲಿ ಪರೀಕ್ಷಾಂಗ ವಿಭಾಗಕ್ಕೆ ಒಂದು ಪ್ರತಿ ಮತ್ತು ಹಣಕಾಸು ವಿಭಾಗಕ್ಕೆ ಒಂದು ಪ್ರತಿಯನ್ನು ತಪ್ಪದೇ ಸಲ್ಲಿಸುವುದು.***

ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆಗಳ ನಂತರ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಂದ ಅನುಮೋದನೆ ಪಡೆದುಕೊಂಡು UUCMS ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಮುಖ್ಯಸ್ಥರು/ ಸಂಯೋಜಕರು/ಪ್ರಾಂಶುಪಾಲರುಗಳು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು.

<u>ಆಂತರಿಕ ಅಂಕಗಳನ್ನು ಸಲ್ಲಿಸುವ ಕುರಿತು ಸೂಚನೆಗಳು:</u>

3. ಸೈದ್ಧಾಂತಿಕ (Theory) ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ಆಂತರಿಕ ಅಂಕಗಳನ್ನು ಮತ್ತು ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಮುಖ್ಯಸ್ಥರು/ಸಂಯೋಜಕರು ಕಾಲೇಜಿನವರು ನಮೂದಿಸಿ, ಪರಿಶೀಲಿಸಿ ಅನುಮೋದಿಸುವುದು ಹಾಗೂ ಧೃಡೀಕೃತ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು ವಿಳಂಬವಾದಲ್ಲಿ ದಿನವೊಂದಕ್ಕೆ ರೂ. 1,000/- ಗಳಂತೆ ಗರಿಷ್ಠ ರೂ. 10,000-00 (ಹತ್ತು ಸಾವಿರ) ಗಳನ್ನು ದಂಡವಾಗಿ ವಿಧಿಸಲಾಗುತ್ತದೆ.

4. ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವುದು ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು/ಸಂಯೋಜಕರ ಜವಾಬ್ದಾರಿಯಾಗಿದ್ದು,ಯಾವುದೇ ರೀತಿಯ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸುವುದು. ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಆಂತರಿಕ ಅಂಕಗಳನ್ನು ಬದಲಿಸುವುದಿಲ್ಲ.

ಎಲ್ಲಾ, ಮುಖ್ಯಸ್ಥರು/ನಿರ್ದೇಶಕರು/ಪ್ರಾಂಶುಪಾಲರು ಸಹಕರಿಸಬೇಕಾಗಿ ಕೋರಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು (ಪರೀಕ್ಷಾಂಗ)

ಗೆ,

1. ಮುಖ್ಯಸ್ಥರು/ ಸಂಯೋಜಕರು ಸ್ನಾತಕೋತ್ತರ ವ್ಯವಹಾರ ಆಡಳಿತ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು/ನಿರ್ದೇಶಕರು, ಶ್ರೀ ಸಿದ್ದಾರ್ಥ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಿಮೆಂಟ್ ಸ್ಟಡೀಸ್, ಮರಳೂರು, ತುಮಕೂರು.

ಪ್ರತಿಗಳು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು(ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ವಿಶ್ವವಿದ್ಯಾನಿಲಯದ ಅಂತರ್ಜಾಲ (Website) ದಲ್ಲಿ ಇಂದೇ ಪ್ರಕಟಿಸುವುದು.
8. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. 9. ಕಛೇರಿ ಪ್ರತಿ.